ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 24-02-2002.

# *ತಂದೆಯನ್ನು ಪ್ರತ್ಯಕ್ಷ ಮಾಡುವುದಕ್ಕೋಸ್ಕರ ತಮ್ಮ ಹಾಗೂ ಇತರರ ವೃತ್ತಿಯನ್ನು ಸಕಾರಾತ್ಮಕವಾಗಿ ತಯಾರು ಮಾಡಿರಿ*

(बाप को प्रत्यक्ष करने के लिए अपनी व दूसरों की वृत्ति को पॉजिटिव बनाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ವಿಶ್ವಕಲ್ಯಾಣಕಾರಿ ಬಾಪ್‌ದಾದಾರವರು ತನ್ನ ನಾಲ್ಕೂ ಕಡೆಯ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಪ್ರತಿಯೊಂದು ಮಗುವಿನ ಮನದ ಉಲ್ಲಾಸವನ್ನು ನೋಡುತ್ತಲೂ ಇದ್ದಾರೆ ಹಾಗು ಕೇಳುತ್ತಿದ್ದಾರೆ. ಎಲ್ಲರ ಮನದಲ್ಲಿ ಅತಿ ಶೀಘ್ರದಲ್ಲಿಯೇ ತಂದೆಯ ಸಮಾನರಾಗಬೇಕೆಂಬ ಲಕ್ಷ್ಯವೊಂದೇ ಇದೆ. ಲಕ್ಷ್ಯವನ್ನು ನೋಡುತ್ತಾ, ಸಾಹಸ(ಧೈರ್ಯ)ವನ್ನು ನೋಡುತ್ತಾ, ಶ್ರೇಷ್ಠ ಸಂಕಲ್ಪವನ್ನು ನೋಡುತ್ತಾ ಬಾಪ್‌ದಾದಾರವರು ಖುಷಿಯಾಗುತ್ತಿದ್ದಾರೆ. ಜೊತೆ-ಜೊತೆಯಲ್ಲಿ ಇದನ್ನು ಸಹ ನೋಡುತ್ತಿದ್ದಾರೆ-ಎಲ್ಲಾ ಮಕ್ಕಳ ಲಕ್ಷ್ಯ ತುಂಬಾ ಶ್ರೇಷ್ಠಾತಿಶ್ರೇಷ್ಠವಾಗಿದೆ. ಆದರೆ ಪ್ರತ್ಯಕ್ಷ ರೂಪದಲ್ಲಿ ಲಕ್ಷಣಗಳು ನಂಬರ್‌ವಾರ್ ಆಗಿವೆ. ಲಕ್ಷ್ಯ ಹಾಗೂ ಲಕ್ಷಣ ಸಮಾನವಾಗಿರುವುದೇ ತಂದೆಯ ಸಮಾನರಾಗುವುದಾಗಿದೆ. ಯಾರು ಸೇವೆಯ ಕ್ಷೇತ್ರದಲ್ಲಿ ನಿಮಿತ್ತ ಮಕ್ಕಳಿದ್ದಾರೆಯೋ. ಅವರು ಸದಾ ತಂದೆಯನ್ನು ಹೇಗೆ ಪ್ರತ್ಯಕ್ಷ ಮಾಡೋಣ, ಯಾವಾಗ ಪ್ರತ್ಯಕ್ಷ ಆಗುತ್ತದೆ ಎಂಬ ಒಂದೇ ಸಂಕಲ್ಪದಲ್ಲಿರುತ್ತಾರೆ. ಈ ರೀತಿಯ ಸಂಕಲ್ಪಗಳು ನಡೆಯುತ್ತದೆಯಲ್ಲವೇ? ಮತ್ತು ತಂದೆ ಮಕ್ಕಳನ್ನು ಕೇಳುತ್ತಾರೆ. ಮಕ್ಕಳೇ ತಾವೆಲ್ಲರೂ ಸಂಪನ್ನ ಹಾಗು ಸಂಪೂರ್ಣ

ಸ್ವರೂಪದಲ್ಲಿ ತಮ್ಮನ್ನು ಯಾವಾಗ ಪ್ರತ್ಯಕ್ಷ ಮಾಡುತ್ತೀರಿ? ಮಕ್ಕಳ ಪ್ರತಿಯಾಗಿ ತಂದೆಯ ಪ್ರಶ್ನೆಯಾಗಿದೆ-ಮಕ್ಕಳೇ ಆ ದಿನಾಂಕವನ್ನು ನಿಗಧಿಪಡಿಸಿದ್ದೀರಾ? ಅಥವಾ ಆ ದಿನಾಂಕ ನಿಗದಿ ಮಾಡಲು ಆಗುವುದಿಲ್ಲವೇ?.

ಯಾವುದೇ ಕಾರ್ಯಕ್ರಮದ ದಿನಾಂಕವನ್ನು ಒಂದು ವರ್ಷದ ಮೊದಲೇ ನಿಗದಿ ಪಡೆಸಲಾಗುವುದೆಂದು ವಿದೇಶದವರು ಹೇಳುತ್ತಾರೆ. ಈ ರೀತಿ ಹೇಳುತ್ತೀರಲ್ಲವೇ! ಸ್ವಯಂನ್ನು ಪ್ರತ್ಯಕ್ಷ ಮಾಡುವ ದಿನಾಂಕವನ್ನು ನಿಗಧಿ ಪಡಿಸಿದ್ದೀರಾ? ಎಂದು ತಂದೆಯು ಕೇಳುತ್ತಾರೆ. ನಿಗಧಿ ಪಡಿಸಿದ್ದೀರಾ? ತುಂಬಾ ಮೀಟಿಂಗ್ ಗಳನ್ನು ಮಾಡಿದ್ದೀರಲ್ಲವೇ? ಮಾಡುತ್ತಲೂ ಇರುವಿರಿ. ಇಂದು ಇಂತಹ ಮೀಟಿಂಗ್ ಇದೆ. ನಾಳೆ ಇಂತಹ ಮೀಟಿಂಗ್ ಇದೆ ಎಂದು ಹೇಳುತ್ತಿರುತ್ತೀರಿ. ಈಗಲೂ ಸಹ ಎಷ್ಟೊಂದು ಮೀಟಿಂಗ್ ಮಾಡುವವರು ಆಗಮಿಸಿದ್ದಾರೆ. ಮೂರು ಪ್ರಕಾರದ ಮೀಟಿಂಗ್ ಮಾಡುವಂತಹವರು ಇಂದೂ ಸಹ ಕುಳಿತುಕೊಂಡಿದ್ದಾರೆ. ಇದು ತುಂಬಾ ಒಳ್ಳೆಯದಾಗಿದೆ. ಆದರೆ ಸ್ವಯಂ ಪ್ರತ್ಯಕ್ಷವಾಗುವ ಮೀಟಿಂಗಿನ ದಿನಾಂಕ ಯಾವುದಾಗಿದೆ' ಏನು ಯೋಚಿಸುತ್ತಿದ್ದೀರೋ ಅದು ಮಾತು ಹಾಗು ಕರ್ಮದಲ್ಲಿರಬೇಕು. ಸಂಕಲ್ಪ, ಮಾತು ಹಾಗು ಕರ್ಮ ಈ ಮೂರು ಶ್ರೇಷ್ಠ ಲಕ್ಷ್ಯದನುಗುಣವಾಗಿರಬೇಕು. ಬಾಪ್‌ದಾದಾರವರು ತನ್ನ ವಿಶ್ವಕಲ್ಯಾಣಕ್ಕೆ ನಿಮಿತ್ತರಾಗಿರುವಂತಹ ಮಕ್ಕಳು, ಸರ್ವ ಆತ್ಮರ ಕಲ್ಯಾಣಕಾರಿಗಳು ಪ್ರತ್ಯಕ್ಷ ರೂಪದಲ್ಲಿ ಸ್ಟೇಜ್ನ ಮೇಲೆ ಯಾವಾಗ ಬರುತ್ತಾರೆಂದು ನೋಡುತ್ತಿದ್ದಾರೆ. ಪ್ರತಿಯೊಬ್ಬರು ಗುಪ್ತ ಪುರುಷಾರ್ಥದಲ್ಲಿ. ತಂದೆಯ ಪ್ರೀತಿಯಲ್ಲಿ ತಲ್ಲೀನರಾಗಿರುವುದನ್ನು ಸಹ ತಂದೆ ನೋಡುತ್ತಾರೆ. ಆದರೆ ಈ ವಿಶೇಷ ಸಂಕಲ್ಪದ ಲಗನ್ನಿನಲ್ಲಿ ಯಾವಾಗ ಮಗ್ನರಾಗುತ್ತೀರಿ? ಲಗನ್ ಅಂತು ಇದೆ ಆದರೆ ನಿರಂತರ ಈ ಸಂಕಲ್ಪವನ್ನು ಸಂಪನ್ನ ಮಾಡುವುದರಲ್ಲಿ ಮಗ್ನರಾಗಿರಬೇಕು. ಅರ್ಥಾತ್ ನಿರಂತರ ಈ ಸಂಕಲ್ಪವನ್ನು ಪೂರ್ಣ ಮಾಡುವ ಪ್ರತ್ಯಕ್ಷ ಸ್ವರೂಪದಲ್ಲಿರಬೇಕು. ಈಗ ಸಂಕಲ್ಪ ಹಾಗು ಪ್ರತ್ಯಕ್ಷ ಕರ್ಮದಲ್ಲಿ ಅಂತರವಿದೆ. ಆಗುವುದೇನೋ ಆಗಬೇಕಾಗಿದೆ ಹಾಗೂ ಮಾಡಬೇಕಾಗಿರುವವರು ಸಹ ಮಕ್ಕಳೇ ಆಗಿದ್ದಾರೆ. ತಂದೆಯಂತು ಬೆನ್ನೆಲುಬಾಗಿಯೇ ಇದ್ದಾರೆ.

ಬಾಪ್‌ದಾದಾರವರು ನೋಡುತ್ತಿದ್ದಾರೆ ಎಲ್ಲಕ್ಕಿಂತಲೂ ತೀವ್ರಗತಿಯ ಸೇವೆ- ವೃತ್ತಿಯಿಂದ ಪ್ರಕಂಪನಗಳನ್ನು(ತರಂಗಗಳನ್ನು) ಹರಡುವುದು. ವೃತ್ತಿ ತುಂಬಾ ತೀವ್ರಗತಿಯದ್ದಾಗಿದೆ. ರಾಕೆಟ್ ಗಿಂತಲು ತೀವ್ರಗತಿಯುಳ್ಳದ್ದಾಗಿದೆ. ವೃತ್ತಿಯಿಂದ ವಾಯುಮಂಡಲವನ್ನು ಪರಿವರ್ತನೆ ಮಾಡಬಹುದು. ಎಲ್ಲಿಗಾದರೂ ಹೋಗಿ ಎಷ್ಟು ಆತ್ಮರ ಪ್ರತಿ ಬೇಕಾದರೂ ವೃತ್ತಿಯ ಮುಖಾಂತರ ಇಲ್ಲಿಯೇ ಕುಳಿತು- ಕುಳಿತ್ತಿದ್ದಂತೆಯೇ ತಲುಪಿಸಬಹುದು. ವೃತ್ತಿಯ ಮುಖಾಂತರ ದೃಷ್ಟಿ ಹಾಗು ಸೃಷ್ಟಿಯನ್ನು ಪರಿವರ್ತನೆ ಮಾಡಬಹುದು. ಆದರೆ ಒಂದೇ ವಿಷಯವು ವೃತ್ತಿಯ ಮೂಲಕ ಸೇವೆ ಮಾಡುವುದರಲ್ಲಿ ಅಡಚಣೆ ಮಾಡುತ್ತಿದೆ. ವೃತ್ತಿಯ ಮೂಲಕ ತರಂಗಗಳನ್ನು ಹರಡಬಹುದು. ಈಗಿನವರೆಗೂ ತಮ್ಮ ಜಡಚಿತ್ರ, ನಿಮ್ಮ ಅಂತಿಮ ಜನ್ಮದವರೆಗೂ ತರಂಗಗಳನ್ನು ಹರಡುವ ಮೂಲಕ ಸೇವೆ ಮಾಡುತ್ತಿದೆಯಲ್ಲವೇ! ನೋಡಿದ್ದೀರಲ್ಲವೇ! ಮಂದಿರವನ್ನು ನೋಡಿದ್ದೀರಲ್ಲವೇ! ಡಬಲ್ ವಿದೇಶಿಯರು ನೋಡಿದ್ದೀರಾ? ಮಂದಿರವನ್ನು ನೋಡಿದ್ದೀರಾ? ನೋಡಿಲ್ಲವೆಂದರೆ ನೋಡಬೇಕು. ಏಕೆಂದರೆ ಅದು ನಿಮ್ಮದೇ ಮಂದಿರವಲ್ಲವೇ! ಕುಮಾರಿಯರೇ ಅದು ನಿಮ್ಮ ಮಂದಿರವಾಗಿದೆ (ಬಾಪ್‌ದಾದಾರವರ ಮುಂದೆ ವಿದೇಶದ ಕುಮಾರಿಯರಿದ್ದಾರೆ) ಅಥವಾ ಭಾರತೀಯರ ಮಂದಿರವಷ್ಟೇ ಆಗಿದೆಯೇ? ಇದು ಎಲ್ಲರ ಮಂದಿರವಾಗಿದೆ. ಒಳ್ಳೆಯದು. ಅಭಿನಂದನೆಗಳು. ಮಂದಿರದ ಮೂರ್ತಿಗಳು

ಪ್ರತ್ಯಕ್ಷ ರೂಪದಲ್ಲಿ ತರಂಗಗಳನ್ನು ಹರಡುವ ಮೂಲಕ ಸೇವೆ ಮಾಡುತ್ತಿವೆ. ಅರ್ಥಾತ್ ತಾವು ಅತ್ಮರು ಮಂದಿರದ ಮೂರ್ತಿಗಳಾಗಿ ಸೇವೆಯನ್ನು ಮಾಡುತ್ತಿದ್ದೀರಿ. ಎಷ್ಟೊಂದು ಭಕ್ತರು ಮೂರ್ತಿಯಿಂದ ತರಂಗಗಳನ್ನು ಪಡೆಯುವ ಮೂಲಕ ತಮ್ಮ ಸರ್ವ ಇಚ್ಛೆಗಳನ್ನು ಪೂರ್ಣ ಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಹೇ ಚೈತನ್ಯ ಮೂರ್ತಿಯರೇ! ಈಗ ತಮ್ಮ ಶುಭ ಭಾವನೆಯ ವೃತ್ತಿ ಶುಭಕಾಮನೆಗಳ ವೃತ್ತಿಯಿಂದ ವಾಯುಮಂಡಲದಲ್ಲಿ ತರಂಗಗಳನ್ನು ಹರಡಬೇಕು. ಆದರೆ, ಆದರೆ ಎಂದು ಹೇಳುವುದು ಇಷ್ಟವಾಗುವುದಿಲ್ಲ ಆದರೂ ಹೇಳಬೇಕಾಗುತ್ತದೆ. ವಾಂಡವರಿಗೆ 'ಆದರೆ' ಎಂಬ ಶಬ್ದವು ಇಷ್ಟವಾಗುತ್ತದೆಯೆ? ಇಷ್ಟವಾಗುವುದಿಲ್ಲ. ಆದರೆ, ಆದರೆ ಎಂಬ ಶಬ್ದ ಇದೆಯೋ ಅಥವಾ ಸಮಾಪ್ತಿಯಾಗಿಬಿಟ್ಟಿದಿಯೋ? ಅದಕ್ಕಾಗಿ ಎಲ್ಲಕ್ಕಿಂತ ಸಹಜ ವಿಧಿಯಾಗಿದೆ. ಪ್ರತಿಯೊಬ್ಬರು ತಮ್ಮ ಅಂತರ್ಯವನ್ನು ಪರಿಶೀಲನೆ ಮಾಡಿಕೊಳ್ಳಿರಿ. ಒಂದು ಸೆಕೆಂಡಿನಲ್ಲಿ ಪರಿಶೀಲನೆ ಮಾಡಿಕೊಳ್ಳಬಹುದು. ಈಗಲೇ ಮಾಡಿ. ಮಾಡಲು ಒಂದು ಸೆಕೆಂಡನ್ನು ಕೊಡಬೇಕೇ? ಹೇಳುವಾಗಲೇ ಒಂದು ಸೆಕೆಂಡ್ ಆಗಿಹೋಯತಲ್ಲವೆ. ಈಗ ತಮ್ಮ ಆಂತರ್ಯವನ್ನು ಪರಿಶೀಲನೆ ಮಾಡಿಕೊಳ್ಳಿರಿ-ನನ್ನ ವೃತ್ತಿಯಲ್ಲಿ (ಭಾವನೆಯಲ್ಲಿ) ಯಾವ ಅತ್ಮನ ಬಗ್ಗೆಯು ಯಾವುದೇ ನಕಾರಾತ್ಮಕ (ನೆಗೆಟೀವ್) ತರಂಗ (ವೈಬ್ರೇಷನ್) ಇದೆಯೇ? ಒಂದುವೇಳೆ ವಿಶ್ವದ ವಾಯುಮಂಡಲವನ್ನು ಪರಿವರ್ತನೆ ಮಾಡಬೇಕಾದರೆ ತಮ್ಮ ಮನದಲ್ಲಿ ಯಾವ ಒಂದು ಅತ್ಮನ ಪ್ರತಿಯೂ ವ್ಯರ್ಥ ಸಂಕಲ್ಪದ ತರಂಗಗಳು ಅಥವಾ ಸತ್ಯಸಂಕಲ್ಪ ಪ್ರಕಂಪನವೂ ನಕಾರಾತ್ಮಕವಿದ್ದಾಗ ವಿಶ್ವ ಪರಿವರ್ತನೆ ಮಾಡಲು ಸಾಧ್ಯವಿಲ್ಲ. ಅದು ಅಡಚನೆ ಆಗುತ್ತಿರುತ್ತದೆ. ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಿರುತ್ತದೆ. ವಾಯುಮಂಡಲದಲ್ಲಿ ಶಕ್ತಿ ಇರುವುದಿಲ್ಲ. ಕೆಲವು ಮಕ್ಕಳು ಈ ರೀತಿ ಹೇಳುತ್ತಾರೆ-ಅವರು ಇರುವುದೇ ಈ ರೀತಿಯಲ್ಲವೇ! ಹಾಗೆಯೇ ಇದ್ದಾರಲ್ಲವೇ! ಆಗ ನಿಮ್ಮ ಈ ಸಂಕಲ್ಪದ ತರಂಗಗಳು ಇದ್ದಂತಾಯಿತಲ್ಲವೆ? ತಂದೆಗೂ ಈ ರೀತಿ ಜ್ಞಾನ ಕೊಡಲು ಪ್ರಾರಂಭಿಸಿಬಿಡುತ್ತಾರೆ. ಬಾಬಾ ನಿಮಗೆ ತಿಳಿಯದು, ಆ ಆತ್ಮ ಇರುವುದೇ ಹಾಗೆ. ಆದರೆ ಬಾಬಾ ಕೇಳುತ್ತಾರೆ-ಅವರೇನೊ ಸರಿಯಿಲ್ಲ, ಕೆಟ್ಟವರಾಗಿದ್ದಾರೆ. ಆಗಬಾರದಾಗಿತ್ತು. ಆದರೆ ಈ ಕೆಟ್ಟದ್ದನ್ನು ತಮ್ಮ ವೃತ್ತಿಯಲ್ಲಿ ಇಟ್ಟುಕೊಳ್ಳಲು ತಂದೆಯ ಅನುಮತಿ ಇದೆಯೇ? ತಂದೆಯ ಅನುಮತಿ ಇಲ್ಲ ಎಂದು ತಿಳಿದುಕೊಳ್ಳುವವರು ಒಂದು ಕೈಯನ್ನು ಎತ್ತಬೇಕು. ಒಂದು ಕೈಯನ್ನು ಎತ್ತಬೇಕು, ಎರಡು ಕೈನ ಚಪ್ಪಾಳೆ ಬೇಡ. ಹಿಂದೆ ಇರುವಂತಹವರು ಕೈ ಎತ್ತುತ್ತಿದ್ದಾರೆಯೇ? ಟಿ.ವಿ ಯಲ್ಲಿ ತೋರಿಸಿ. (ದಾದೀಜಿಯವರಿಗೆ) ತಾವು ನೋಡುತ್ತಿದ್ದೀರಲ್ಲವೇ ಒಳ್ಳೆಯದು. ಕೈ ಎತ್ತಿದ್ದೇವೆಂದು ನೆನಪಿಟ್ಟುಕೊಳ್ಳಬೇಕು. ಡಬಲ್ ವಿದೇಶಿಯರು ಕೈ ಎತ್ತಿದ್ದಿರಾ? ಬಾಪ್‌ದಾದಾರವರ ಟಿ.ವಿಯಲ್ಲಂತು ಬಂದೇಬಿಟ್ಟಿರುತ್ತದೆ. **ಎಲ್ಲಿಯವರೆಗೆ ಪ್ರತಿಯೊಬ್ಬ ಬ್ರಾಹ್ಮಣಾತ್ಮಲ್ಲಿ ಸ್ವಯಂನ ವೃತ್ತಿಯಿಂದ ಯಾವುದೇ ಆತ್ಮನ ಪ್ರತಿ ನಕರಾತ್ಮಕ ತರಂಗಗಳಿರುತ್ತವೆಯೋ ಅಲ್ಲಿಯವರೆಗೆ ವಿಶ್ವಕಲ್ಯಾಣವನ್ನು ಮಾಡಲು ಆಗುವುದಿಲ್ಲ. ಏಕೆಂದರೆ ಆ ನಕಾರಾತ್ಮಕ ವೃತ್ತಿಯಿಂದ ವಾಯುಮಂಡಲದಲ್ಲಿ ಶಕ್ತಿಶಾಲಿ ತರಂಗಗಳನ್ನು ಹರಡಲು ಸಾಧ್ಯವಿಲ್ಲ. ಇದನ್ನು ಪಕ್ಕಾ ತಿಳಿದುಕೊಂಡುಬಿಡಿ. ಎಷ್ಟೇ ಸೇವೆಯನ್ನು ಮಾಡಿ. ಪ್ರತಿನಿತ್ಯ ಎಂಟೆಂಟು ಭಾಷಣಗಳನ್ನು ಬೇಕಾದರೆ ಮಾಡಿ, ಎಷ್ಟಾದರು ಯೋಗಶಿಬಿರಗಳನ್ನು ಮಾಡಿ. ಅನೇಕ ಪ್ರಕಾರದ ಕೋರ್ಸನ್ನು ತಿಳಿಸಿಕೊಡಿ ಆದರೆ ಯಾರದೇ ಪ್ರತಿಯಾಗಿ ತಮ್ಮ ವೃತ್ತಿಯಲ್ಲಿ ಯಾವುದೇ ಹಳೆಯ ನಕಾರಾತ್ಮಕ ತರಂಗಗಳನ್ನು ಇಟ್ಟುಕೊಳ್ಳಬೇಡಿ. ಒಳ್ಳೆಯದು. ಅವರು ಸರಿಯಿಲ್ಲ, ತುಂಬಾ ತಪ್ಪುಗಳನ್ನು ಮಾಡುತ್ತಾರೆ. ಅನೇಕರಿಗೆ ದುಃಖಕೊಡುತ್ತಾರೆ. ಅಂದಾಗ ತಾವು ಅಂತಹವರಿಗೆ ದುಃಖಕೊಡುವಲ್ಲಿ ಜವಾಬ್ದಾರರಾಗುವ ಬದಲು, ಅವರನ್ನು ಪರಿವರ್ತನೆ ಮಾಡಲು ಸಹಯೋಗಿ ಆಗಲು ಸಾಧ್ಯವಿಲ್ಲವೇ. ದುಃಖ ಕೊಡುವಂತಹ ಸಹಯೋಗಿ ಆಗಬಾರದು.**

ಅವರನ್ನು ಪರಿವರ್ತನೆ ಮಾಡಲು ತಾವು ಸಹಯೋಗಿಗಳಾಗಿ. ಒಂದುವೇಳೆ ಅಂತಹ ಪರಿವರ್ತನೆ ಆಗದಿರುವಂತಹ ಆತ್ಮರು ಇರುವರೆಂದು ನಿಮಗೆ ತಿಳಿಯಿತೆಂದು ಇಟ್ಟುಕೊಳ್ಳಿ. ತಮ್ಮ ನಿರ್ಣಯದಲ್ಲಿ ಅವರು ಪರಿವರ್ತನೆ ಆಗುವವರಲ್ಲ. ಆದರೆ ನಂಬರ್ವಾರಂತು ಇದೆಯಲ್ಲವೇ! ಅಂದಾಗ ಇವರು ಪರಿವರ್ತನೆಯಾಗುವವರಲ್ಲವೆಂದು ನೀವು ಏಕೆ ಯೋಚಿಸಬೇಕು? ತಾವು ಏಕೆ ನಿರ್ಣಯವನ್ನು ಕೊಡುತ್ತೀರಿ. ಅದನ್ನು ತಂದೆ ನಿರ್ಣಯ ಮಾಡಲು ಇದ್ದಾರಲ್ಲವೇ. ನೀವು ಪರಸ್ಪರ ಬೇರೊಬ್ಬರನ್ನು ನಿರ್ಣಯ ಮಾಡುವವರಾಗಿಬಿಟ್ಟಿದ್ದೀರಾ? ಯಾರು-ಯಾರು ಹೇಗೆ ಇದ್ದಾರೆಂಬುದನ್ನು ತಂದೆಯೂ ಸಹ ನೋಡುತ್ತಿದ್ದಾರೆ... ಬ್ರಹ್ಮಾ ತಂದೆಯನ್ನು ಪ್ರತ್ಯಕ್ಷ ರೂಪದಲ್ಲಿ ನೋಡಿದ್ದೀರಲ್ಲವೇ-ಎಂತಹವರೇ ಆಗಿರಲಿ ಮತ್ತೆ-ಮತ್ತೆ ತಪ್ಪು ಮಾಡುವಂತಹ ಆತ್ಮನಾಗಿರಬಹುದು. ಆದರೆ ಬಾಪ್‌ದಾದಾ (ವಿಶೇಷ ಸಾಕಾರ ರೂಪದಲ್ಲಿ ಬ್ರಹ್ಮಾ ತಂದೆಯು) ಸರ್ವ ಮಕ್ಕಳ ಪ್ರತಿ ನೆನಪು, ಪ್ರೀತಿ. ಸರ್ವ ಮಕ್ಕಳಿಗೆ ಮಧುರ- ಮಧುರ ಎಂದು ಹೇಳುತ್ತಾರಲ್ಲವೇ ಅಥವಾ ಮೂರು ನಾಲ್ಕು ಮಕ್ಕಳು ಕೆಟ್ಟವರು ಹಾಗೂ ಉಳಿದವರೆಲ್ಲರೂ ಮಧುರವಾಗಿರುವವರು ಎಂದು ಹೇಳುತ್ತಾರೆಯೇ? ಆದರೂ ಅಂತಹ ಆತ್ಮರ ಪ್ರತಿಯೂ ಸಹ ತಂದೆಯು ದಯಾ ಹೃದಯಿಯಾದರು, ಕ್ಷಮಾಸಾಗರರಾದರು, ಒಳ್ಳೆಯದು. ಆದರೆ ತಾವು ತಮ್ಮ ವೃತ್ತಿಯಲ್ಲಿ ಯಾರ ಪ್ರತಿಯಾದರು ನಕಾರಾತ್ಮಕ ಭಾವವನ್ನು ಇಟ್ಟುಕೊಂಡರೆ ಇದರಿಂದ ತಮಗೆ ಲಾಭವೇನು? ಒಂದು ವೇಳೆ ನಿಮಗೆ ಲಾಭವಿದ್ದರೆ ಇಟ್ಟುಕೊಳ್ಳಬಹುದು. ತಂದೆಯ ಅನುಮತಿ ಸಹ ಇದೆ. ಒಂದು ವೇಳೆ ಲಾಭವಿಲ್ಲವೆಂದರೆ ಅದರಿಂದ ವ್ಯಾಕುಲರಾಗುತ್ತೀರಂದರೆ ಆ ಮಾತು ತಮ್ಮ ಮುಂದೆ ಬರುತ್ತಿರುತ್ತದೆ. ಬಾಪ್‌ದಾದಾ ನೋಡುತ್ತಿದ್ದಾರೆ ಆ ಸಮಯದಲ್ಲಿ ಅವರಿಗೆ ದರ್ಪಣವನ್ನು ತೋರಿಸಬೇಕು. ಇದು ತಪ್ಪು, ಇದು ಸರಿ ಎಂದು ತಿಳಿದುಕೊಂಡು ಜ್ಞಾನವಂತರಾಗುವುದು ಬೇರೆ ವಿಷಯ. ಆದರೆ ಯಾವ ಲಾಭವಿಲ್ಲದ ವಿಷಯಗಳನ್ನು ವೃತ್ತಿಯಲ್ಲಿ ಧಾರಣೆ ಮಾಡುವುದು ತಪ್ಪು. ಏಕೆಂದರೆ ಇದರಿಂದ ನೀವು ಮೂಡ್ ಆಫ್ ಆಗುತ್ತೀರಿ. ವ್ಯರ್ಥ ಸಂಕಲ್ಪಗಳು ಬರುತ್ತವೆ. ಸ್ಮೃತಿಯ ಶಕ್ತಿ ಕಡಿಮೆಯಾಗಿ ಬಿಡುತ್ತದೆ. ಅರ್ಥಾತ್ ನಷ್ಟವಾಗುತ್ತದೆ. ಪ್ರಕೃತಿಯನ್ನೂ ಸಹ ಪಾವನವನ್ನಾಗಿ ಮಾಡುವವರಲ್ಲವೇ! ಆದರೆ ಇವರಂತೂ ಆತ್ಮರು. ವೃತ್ತಿ, ತರಂಗಗಳು ಮತ್ತು ವಾಯುಮಂಡಲ ಮೂರಕ್ಕೂ ಸಂಬಂಧವಿದೆ. ವೃತ್ತಿಯಿಂದ ತರಂಗಗಳು ವ್ಯಾಪಿಸುತ್ತವೆ ತರಂಗಗಳಿಂದ ವಾಯುಮಂಡಲವು ತಯಾರಾಗುತ್ತದೆ ಆದರೆ ಮುಖ್ಯವಾದದ್ದು ವೃತ್ತಿ, ಶೀಘ್ರವಾಗಿ ತಂದೆಯ ಪ್ರತ್ಯಕ್ಷವಾಗಬೇಕು ಎಂದು ನೀವು ಭಾವಿಸುತ್ತಿದ್ದರೆ ಅದಕ್ಕೆ ತೀವ್ರ ವೇಗವಂತವಾದ ಪದ್ಧತಿ ಏನೆಂದರೆ ನಿಮಗಾಗಿ ನೀವು, ಇತರರಿಗಾಗಿ ನೀವು ನಿಮ್ಮ ವೃತ್ತಿಯನ್ನು ಸಕಾರಾತ್ಮಕವಾಗಿ (ಶುದ್ಧವಾಗಿ) ತಯಾರು ಮಾಡಿಕೊಳ್ಳಬೇಕು. ಜ್ಞಾನಿಗಳಂತೂ ಆಗಿರಿ ಆದರೆ ನಿಮ್ಮ ಮನಸ್ಸಿನಲ್ಲಿ ನೆಗೆಟಿವ್ (ನಕಾರಾತ್ಮಕ) ಅನ್ನು ಎಂದೂ ಧಾರಣೆ ಮಾಡಬೇಡಿರಿ. ನೆಗೆಟಿವ್ ಅರ್ಥಾತ್ ಕೊಳಕು. ಈಗಲೇ ವೃತ್ತಿಯನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿ ಮತ್ತು ತರಂಗಗಳನ್ನು ಶಕ್ತಿವಂತವಾಗಿ ತಯಾರು ಮಾಡಿಕೊಳ್ಳಿರಿ. ವಾಯುಮಂಡಲವನ್ನು ಶಕ್ತಿಶಾಲಿಯನ್ನಾಗಿ ತಯಾರು ಮಾಡಿರಿ ಏಕೆಂದರೆ ವಾಚಾದ ಮೂಲಕ ಪರಿವರ್ತನೆ, ಶಿಕ್ಷಣದ ಮೂಲಕ ಪರಿವರ್ತನೆ ಎಂಬುದು ಬಹಳ ಕಡಿಮೆ ವೇಗದಿಂದ ಆಗುತ್ತದೆ. ಇದು ನಿಮ್ಮೆಲ್ಲರಿಗೆ ಅನುಭವವಿದೆಯಲ್ಲವೇ. ಪರಿವರ್ತನೆ ಆಗುತ್ತದೆ ಆದರೆ ಬಹಳ ಕಡಿಮೆ ವೇಗದಿಂದ ಆಗುತ್ತದೆ. ಒಂದು ವೇಳೆ ನೀವು ತೀವ್ರ ವೇಗದಿಂದ ಮಾಡಬೇಕು ಎಂದುಕೊಂಡರೆ ಜ್ಞಾನವಂತರಾಗಿ, ಕ್ಷಮಾಸಾಗರರಾಗಿ, ದಯಾ ಹೃದಯ ಉಳ್ಳವರಾಗಿ ಶುಭಭಾವನೆ, ಶುಭಕಾಮನೆಯಿಂದ ವಾಯುಮಂಡಲವನ್ನು ಪರಿವರ್ತನೆ ಮಾಡಿರಿ. ಯಾರು ಮಧುಬನಕ್ಕೆ ಬಂದರೂ ಎಲ್ಲದಕ್ಕಿಂತಲೂ ಹೆಚ್ಚು ಯಾವ ವಿಷಯದ ಪ್ರಭಾವ ಬೀಳುತ್ತದೆ? ವಾಯುಮಂಡಲದ ಪ್ರಭಾವ ಬೀರುತ್ತದೆ.

ಇಲ್ಲಿಯೂ ಎಲ್ಲರೂ ನಂಬರ್‌ವಾರಾಗಿ ಇರುತ್ತಾರೆ. ಬ್ರಹ್ಮಾ ತಂದೆಯ ಕರ್ಮ ಭೂಮಿ, ಬಾಪ್‌ದಾದಾರವರ ವರದಾನಿ ಭೂಮಿ ಆದ್ದರಿಂದ ಆ ವಾಯುಮಂಡಲವು ಅವರನ್ನು ಪರಿವರ್ತನೆ ಮಾಡುತ್ತದೆ. ನೀವೆಲ್ಲರೂ ಇದನ್ನು ಪ್ರತ್ಯಕ್ಷವಾಗಿ ನೋಡಿದ್ದೀರಲ್ಲವೇ? ಅನುಭವವಿದೆಯಲ್ಲವೇ? ಆದ್ದರಿಂದ ತರಂಗಗಳ ಮೂಲಕ ವಾಯುಮಂಡಲವನ್ನು ತಯಾರು ಮಾಡುವುದರಿಂದ ತೀವ್ರಗತಿಯಿಂದ ಮನಸ್ಸಿನ ಮೇಲೆ ಮುದ್ರೆ ಬೀಳುತ್ತದೆ. ವಾಯುಮಂಡಲ ಮನಸ್ಸಿನಲ್ಲಿ ಮುದ್ರಿಸಲ್ಪಡುತ್ತದೆ. ಕೇಳಿರುವಂತಹ ವಿಷಯಗಳು ಮರೆತು ಹೋಗಬಹುದು ಆದರೆ ವಾಯುಮಂಡಲ ಎಂಬುವುದು ಮನಸ್ಸಿನ ಮೇಲೆ ಮುದ್ರೆ ಬಿದ್ದುಬಿಡುತ್ತದೆ. ಇದನ್ನು ಮರೆಯಲಾಗುವುದಿಲ್ಲ. ಹೌದಲ್ಲವೇ? ಪ್ರತ್ಯಕ್ಷತೆ ಯಾವಾಗ ಆಗುತ್ತದೆ ಎಂದು ಪರಸ್ಪರ ಆತ್ಮಿಕ ಸಂಭಾಷಣೆಯನ್ನು ಬಹಳ ಚೆನ್ನಾಗಿ ಮಾಡುತ್ತಿದ್ದೀರಿ. ಬಾಪ್‌ದಾದಾ ಕೇಳಿಸಿಕೊಳ್ಳುತ್ತಿದ್ದಾರೆ, ಒಳ್ಳೆಯದು. ಹೇಳಿರಿ ಪಾಂಡವರೇ ಈಗ ಏನು ಮಾಡುತ್ತೀರಿ?  ವಾಯುಮಂಡಲವನ್ನು ಶಕ್ತಿಶಾಲಿಯಾಗಿ ತಯಾರು ಮಾಡಬೇಕು. ಸೇವಾ ಕೇಂದ್ರವಾದರೂ, ಯಾವ ಸ್ಥಾನವನ್ನಾದರೂ, ಪ್ರವೃತ್ತಿಯಲ್ಲಿ ಇರುತ್ತಿದ್ದರೂ, ವಾಯುಮಂಡಲ ಶಕ್ತಿವಂತವಾಗಿ ಇರಬೇಕು. ನಾಲ್ಕೂ ಕಡೆಯ ವಾಯುಮಂಡಲ ಸಂಪೂರ್ಣ ನಿರ್ವಿಘ್ನವಾಗಿ, ದಯಾಹೃದಯದ ಭಾವನೆಯಿಂದ, ಶುಭ ಭಾವನೆ ಶುಭಕಾಮನೆಯಿಂದ ತುಂಬಿ ಹೋದರೆ ಪ್ರತ್ಯಕ್ಷದಲ್ಲಿ ಯಾವ ಆಲಸ್ಯವು ಇರುವುದಿಲ್ಲ. ಈಗ ಬಾಪ್‌ದಾದಾ ಯಾವ ತಾರೀಖನ್ನು ಕೊಟ್ಟಿದ್ದಾರೆಯೋ ಅದು ಬಾಪ್‌ದಾದಾರವರಿಗೆ ನೆನಪಿದೆ.  ಲೆಕ್ಕವಂತು ಕೇಳುತ್ತಾರೆ. ಪ್ರತಿಯೊಬ್ಬರೂ ತಮ್ಮ ತಮ್ಮ ಅಕೌಂಟನ್ನು ಇಟ್ಟುಕೊಂಡಿದ್ದೀರಲ್ಲವೇ. ಹಾಗಾದರೆ ಆ ಅಕೌಂಟ್ ನಲ್ಲಿ ಬಾಪ್‌ದಾದಾ ಇದನ್ನೇ ಪರಿಶೀಲಿಸುತ್ತಾರೆ. ವೃತ್ತಿಯಲ್ಲಿ, ದೃಷ್ಟಿಯಲ್ಲಿ, ಮಾತಿನಲ್ಲಿ, ದಯಾ ಹೃದಯಿಯಾಗಿ ಶುಭಭಾವನೆ,  ಶುಭಕಾಮನೆ ಎಷ್ಟು ಪ್ರತಿಶತವಿದೆ. ಈಗಲೂ ಇನ್ನೂ 15 ದಿನಗಳಿವೆಯಲ್ಲವೇ! ಹೆಚ್ಚೇ ಆಗಿವೆ. ಯಾರಾದರೂ ಮಾಡದೇ ಇದ್ದರೂ ಈ 15 ದಿನಗಳಲ್ಲಿ ಮಾಡಬಹುದು. ಆದರೂ ಪಾಸ್ ಮಾಡುತ್ತಾರೆ. ಕಳೆದು ಹೋದದ್ದಕ್ಕೆ ಬಿಂದು ಇಡಬೇಕು ಮತ್ತು ದಯಾ ಸಿಂಧು ಆಗಬೇಕು. ಕ್ಷಮಾ ಸಾಗರರಾಗಬೇಕು. (ಬಾಪ್‌ದಾದಾರವರು ಡ್ರಿಲ್ ಮಾಡಿಸಿದರು.)

ಎಲ್ಲರೂ ಕೇಳಿದಿರಲ್ಲವೇ! ಒಳ್ಳೆಯದು. ಮೂರು ವಿಧದ ಮೀಟಿಂಗ್ ಮಾಡುವವರು ಬಂದಿದ್ದೀರಲ್ಲವೆ, ಸ್ಟಾಕ್-ಕಡೆಯವರು ಒಂದು ಕೈಯನ್ನು ಎತ್ತಿರಿ. ಒಳ್ಳೆಯದು ತುಂಬಾ ಒಳ್ಳೆಯದು ಈಗ ಈ ವಿಷಯದ ಮೇಲೆ ಸಂಶೋಧನೆ ಮಾಡಿ ಪ್ರತ್ಯಕ್ಷವಾಗಿ ವಾಯುಮಂಡಲವನ್ನು ಶ್ರೇಷ್ಠಾತಿಶ್ರೇಷ್ಠ ಮಾಡುವುದು ಹೇಗೆ! ಸಂಶೋದನೆ ಮಾಡುತ್ತಿದ್ದೀರಲ್ಲವೇ ಕೃಷಿ ಕ್ಷೇತ್ರ ವಾಯುಮಂಡಲವನ್ನು ಮಾಡಲು ಬುದ್ಧಿಯಲ್ಲಿ ಏನೇನು ಇಟ್ಟುಕೊಳ್ಳಬೇಕು? ಎಂತಹ ಕರ್ಮ ಮಾಡಬೇಕು. ಸಂಬಂಧ ಸಂಪರ್ಕದಲ್ಲಿ ಏನು ಮಾಡಬೇಕು. ತಮ್ಮನ್ನು ತಾವು ವ್ಯಸ್ತವಾಗಿ ಇಟ್ಟುಕೊಳ್ಳುವುದು ಒಳ್ಳೆಯ ಮಾತಾಗಿದೆ. ಆದರೆ ಬಾಪ್‌ದಾದಾ ಇದನ್ನು ಪ್ರತ್ಯಕ್ಷ ಅನುಭವದಲ್ಲಿ ನೋಡಲು ಇಷ್ಟ ಪಡುತ್ತಾರೆ-ಹೇಗೆ ಪ್ರತ್ಯಕ್ಷದಲ್ಲಿ ಮಾಡುತ್ತಾ ಅದರ ಪರಿಣಾಮ ಏನಾಯಿತು? ಒಂದುವೇಳೆ ಮಧ್ಯದಲ್ಲಿ ಆಡಚಣೆ ಆಗುತ್ತದೆ ಎಂದರೆ ಯಾವ ಅಡಚಣೆ ಆಯಿತು? ಈ ಅನುಭವವನ್ನು ಪ್ರತ್ಯಕ್ಷವಾಗಿ ಮಾಡಿ ನೋಡಿ. ಈ ರೀತಿ ಮಾಡಬೇಕು. ಈ ರೀತಿ ಮಾಡಬೇಕು ಎಂದು ಕೇವಲ ಪಾಯಿಂಟನ್ನು ತೆಗೆಯಬಾರದು. ಮಾಡಿ ಅನುಭವ ಮಾಡಿ ಮಾದರಿಯಾಗಿ ತೋರಿಸಿ ಹಾಗೂ ಆ ಮಾದರಿಯು ಅನ್ಯರಿಗೂ ಸಹಯೋಗ ಕೊಡುತ್ತದೆ. ಸರಿಯಲ್ಲವೇ? ಇವರು (ರಮೇಷ ಭಾಯಿ) ನಿಮಿತ್ತ ಆಗಿದ್ದಾರಲ್ಲವೇ? ಚೆನ್ನಾಗಿದೆ. ಬಾಪ್‌ದಾದಾ ತಿಳಿಸುತ್ತಾರೆ ಈಗಿನ್ನೂ ಹದಿನೈದು ದಿನಗಳಿವೆ. ಇನ್ನು ಕೊನೆ ಆಗಿಲ್ಲ. ತುಂಬಾ ಮುಗಿದು ಸ್ವಲ್ಪವೇ

ಉಳಿದಿದೆ. ಆದುದರಿಂದ ಸ್ವಾರ್ಕಿನವರು ಈ ರೀತಿ ಪ್ರತ್ಯಕ್ಷವಾಗಿ ಮಾಡಿ ನೋಡಿ ಹಾಗೂ ಅನ್ಯರಿಗೂ ತೋರಿಸಿ ಸರಿಯಲ್ಲವೇ? ಮಾಡಲು ಸಾಧ್ಯವೇ? ಸಾಧ್ಯವಾಗುತ್ತದೆಯೇ? ಒಳ್ಳೆಯದು ತುಂಬಾ ಚೆನ್ನಾಗಿದೆ. ಒಳ್ಳೆಯದು.

ಮತ್ತೊಂದು ಮೀಟಿಂಗ್ ಸಾರಿಗೆ (ಟ್ರಾನ್ಸ್ ಪೋರ್ಟ್) ಯವರದ್ದಾಗಿದೆ ಸಾರಿಗೆಯವರು ಸರ್ವರಿಗೂ ಸುಖ ಕೊಡುತ್ತಾರೆ. ಸಾರಿಗೆಯವರು ಕೈಯನ್ನು ಎತ್ತಿರಿ. ಒಳ್ಳೆಯದು. ಸಹೋದರಿಯರು, ಸಹೋದರಿಯರಿಲ್ಲದೇ ಮುಕ್ತಿ ಇಲ್ಲ. ಒಳೆಯದು. ಸಾರಿಗೆಯವರು ಏನು ಮಾಡುತ್ತೀರಿ? ಕೇವಲ ಯಾತ್ರೆ ಮಾಡುಸುತ್ತೀರಷ್ಟೇನಾ? ಸಾರಿಗೆಯವರು ಪರಸ್ಪರ ಇಂತಹ ಕಾರ್ಯಕ್ರಮವನ್ನು ಮಾಡಿ ಎಂತಹ ಆತ್ಮನಿಗೂ ಸಹ ಕಡಿಮೆಯಲ್ಲಿ ಕಡಿಮೆ ಸ್ವಲ್ಪ ಸಮಯಕ್ಕಾಗಿ ದುಃಖದ ಪ್ರಪಂಚದಿಂದ ದೂರ ಮಾಡಿ. ಸ್ವಲ್ಪ ಸಮಯಕ್ಕಾಗಿ ಶಾಂತಿಯ ಯಾತ್ರೆಯನ್ನು ಮಾಡಿಸಬೇಕು. ಪರಂಧಾಮದವರೆಗೂ ತಲುಪಿಸುವುದು ಕಷ್ಟವಾದ ಮಾತು, ಆದರೆ ದುಃಖದ ಪ್ರಪಂಚದಿಂದ ಶಾಂತಿ ಎಂಬ ಯಾತ್ರೆ ಮಾಡಿಸಬಹುದು. ಅಂತಹ ಯೋಜನೆಯನ್ನು ತುಂಬಾ ಮಾಡಿ. ಅದರಿಂದ ನಾಲ್ಕೂ ಕಡೆಯ ಯಾತ್ರೆಯವರಿಗೆ ಬಾಪ್‌ದಾದಾರವರ ಸಂದೇಶ ತಲುಪಬೇಕು, ತಲುಪಿಬಿಡುತ್ತದೆ. ಏಕೆಂದರೆ ಯಾವುದೇ ವರ್ಗ ಉಳಿದುಕೊಂಡಿಲ್ಲ. ತಾನೆ. ಈ ವರ್ಗೀಕರಣದ ಸೇವೆ ಮಾಡುತ್ತಿರುವುದು ತುಂಬಾ ಒಳ್ಳೆಯ ಸೇವೆಯಾಗಿದೆ. ಯಾರಿಂದಲೂ ದೂರನ್ನು ಕೇಳುವ ಹಾಗಿಲ್ಲ. ಯಾವುದೇ ವರ್ಗ ಹಾಗೆಯೇ ಉಳಿದುಬಿಡುವುದಿಲ್ಲ. ಪ್ರತಿಯೊಬ್ಬರು ತಮ್ಮ ವರ್ಗವನ್ನು ಮುಂದುವರೆಸುವ ಉಲ್ಲಾಸವಂತೂ ಇಟ್ಟುಕೊಳ್ಳುತ್ತೀರಲ್ಲವೇ! ಇದು ತುಂಬಾ ಚೆನ್ನಾಗಿದೆ. ಆದರೆ ಈಗ ಯಾವ ವರ್ಗಗಳು ಆಗಿವೆ. ಎಷ್ಟು ಸಮಯದಿಂದ ಆ ವರ್ಗ ನಡೆಯುತ್ತಿದೆ. ಒಂದುವರೆ ಎರಡು ವರ್ಷವಾಗಿದೆಯೇ. ಅಥವಾ ಇನ್ನೂ ಜಾಸ್ತಿ ಆಗಿದೆಯೇ. (ಹತ್ತು ಹನ್ನೆರಡು ವರ್ಷ) ವರ್ಗೀಕರಣ ಸೇವೆಯು ಹತ್ತು - ಹನ್ನೆರಡು ವರ್ಷಗಳಾಯಿತೇನು? ಒಳ್ಳೆಯದು. ತುಂಬಾ ಸಮಯವಾಗಿಬಿಟ್ಟಿದೆ. ವರ್ಗಗಳ ಪ್ರತಿಯಾಗಿ ಬಾಪ್‌ದಾದಾರವರಿಗೆ ಒಂದು ಸಂಕಲ್ಪವಿದೆ. ಬಾಪ್‌ದಾದಾರವರು ಎರಡು - ಮೂರು ಬಾರಿ ಹೇಳಿದ್ದಾರೆ. ಆದರೆ ಇದುವರೆಗೂ ಅದನ್ನು ಮಾಡಿಲ್ಲ. ಪ್ರತಿಯೊಂದು ವರ್ಗದವರು ಎಷ್ಟು ಸಮಯದಿಂದ ಸೇವೆ ಮಾಡುತ್ತಿದ್ದೀರಿ. ಆ ಒಂದೊಂದು ವರ್ಗದ ವಿಶೇಷ ಸೇವಾಧಾರಿ, ಸಹಯೋಗಿ ಆಗಿರಬಹುದು. ಅರ್ಧ ಯೋಗಿಯಾಗಿರಬಹುದು, ಒಮ್ಮೊಮ್ಮೆ ಬರುವಂತಹವರು ಆಗಿರಬಹುದು, ಪ್ರತಿನಿತ್ಯ ಬಾರದಿರಬಹುದು. ಈ ರೀತಿ ಪ್ರತಿ ವರ್ಗದಲ್ಲಿ ಕಡಿಮೆಯೆಂದರೆ ಕಡಿಮೆ ಐದು ಜನ ಆತ್ಮರನ್ನಾದರೂ ಎಲ್ಲಾ ವರ್ಗದ ಮುಂದೆ ತರಬೇಕು. ಮಧುಬನದಲ್ಲಿ ಅವರನ್ನು ಎಲ್ಲರು ನೋಡುವಂತಾಗಬೇಕು ವರ್ಗದವರು ಆದರೆ ಹತ್ತು ಹನ್ನೆರಡು ವಿಶೇಷ ಆತ್ಮರಾಗಿರಲಿ. ಆದರೆ ಐದು ಪಕ್ಕಾ ಉತ್ತಮ ಸಹಯೋಗಿ ಸೇವೆಗೆ ನಿಮಿತ್ತ ಆಗುವಂತಹ ಆತ್ಮರಾದರೂ ಇರಲಿ. ಐದು ಐದು ಮಂದಿಯನ್ನಾದರು ಸಭೆಯ ಮುಂದೆ ತರಲು ಸಾಧ್ಯವಿದೆಯೇ ಅಥವಾ ಇಲ್ಲವೇ? ಆಗುತ್ತದೆನ್ನುವುದಾದರೆ ಕರೆತನ್ನಿ. ಕರೆತರುವುದು ಯಾವಾಗ? ಅದು ದಾದಿಯರ ಮೇಲೆ ಆಧಾರವಾಗಿದೆ. ಅವರು ಬಾಪ್‌ದಾದಾರವರನ್ನು ಮಿಲನ ಮಾಡಲು ಯೋಗ್ಯರಾಗಿರಲಿ, ಐದು ಜನರನ್ನು ತಯಾರು ಮಾಡಬಹುದಲ್ಲವೇ? ಹೆಚ್ಚು ಮಾಡಲು ಹೇಳುತ್ತಿಲ್ಲ 5 ಸಾಕು. ನಂತರ ದಾದಿಯರು ಪಾಸ್ ಮಾಡುತ್ತಾರೆ.

ಮೂರನೆಯ ಮೀಟಿಂಗ್ - ಇಂಜಿನಿಯರ್ ಗಳದಾಗಿದೆ. ತುಂಬಾ ಚೆನ್ನಾಗಿದೆ. ಇವರ ಕೆಲಸ ಯೋಜನೆಗಳನ್ನು ತಯಾರು ಮಾಡುವುದಾಗಿದೆ. ಅಂದಾಗ ಯಾವುದಾದರೂ ತೀವ್ರ ಪುರುಷಾರ್ಥದ ಯೋಜನೆಯನ್ನು

ಮಾಡಿದ್ದೀರಾ. ಕೇವಲ ಸೇವೆಯ ಯೋಜನೆಯನ್ನು ಮಾಡಿದ್ದೀರಾ? ಇಂಜಿನಿಯರ್ಸ್ ಪ್ರತಿಯೊಂದು ತಿಂಗಳು ತೀವ್ರ ಪುರುಷಾರ್ಥಕ್ಕಾಗಿ ಯಾವುದಾದರೂ ಹೊಸ ಹೊಸ ಯೋಜನೆಯನ್ನು ತಯಾರು ಮಾಡಬೇಕು. ತಾವು ಸಲಹೆ ಕೊಟ್ಟರೆ ದಾದಿಯರು ಅದನ್ನು ಅಂತಿಮ ನಿರ್ಣಯ ಮಾಡುತ್ತಾರೆ. ದಾದಿಯರು ನಿಮ್ಮ ಜೊತೆಯಲ್ಲಿ ಇರುತ್ತಾರೆ. ಆದರೆ ಇಂಜಿನಿಯರ್ಸ್ ಹಾಗೂ ವಿಜ್ಞಾನದವರು ಇಂತಹ ಯಾವುದಾದರೂ ಯೋಜನೆಯನ್ನು ಮಾಡಬೇಕು. ಅದರಿಂದಲೇ ಅತಿ ಶೀಘ್ರವಾಗಿ ಹೊಸ ಪ್ರಪಂಚವು ಬರಬೇಕು. ಇದೇ ರೀತಿ ಮೀಟಿಂಗ್ ಮಾಡುತ್ತಾ, ಯೋಜನೆಗಳನ್ನು ಮಾಡುತ್ತಿದ್ದರೆ, ಎಲ್ಲಿಯವರೆಗೆ? ಯಾವುದಾದರೂ ತೀವ್ರಗತಿಯ ಯೋಜನೆಯನ್ನು ಮಾಡಿರಿ ಏಕೆಂದರೆ ಎಲ್ಲಾ ವರ್ಗದವರ ಲಕ್ಷ್ಯವು ಒಂದೇ ಆಗಿದೆ. ಇಂತಹ ಯೋಜನೆಯಿಂದ ನಮ್ಮ ರಾಜ್ಯ ಶೀಘ್ರವಾಗಿ ಬಂದು ಬಿಡಲಿ. ಹಾಗೂ ಸೇವೆಯಲ್ಲಿ ಕಡಿಮೆ ಸಮಯ ಹೆಚ್ಚು ಸಫಲತೆ ಪ್ರತ್ಯಕ್ಷವಾಗಿ ಕಾಣಲಿ. ಇಂತಹ ಯೋಜನೆಯನ್ನು ಮಾಡಬೇಕು ಮಾಡುತ್ತೀರಾ? ಇಂತಹ ಯೋಜನೆಯನ್ನು ತಯಾರು ಮಾಡುತ್ತಿರಲ್ಲವೇ! ಕೊನೆಯ ಟರ್ನ್ ನಲ್ಲಿ ಎಲ್ಲರ ಫಲಿತಾಂಶವನ್ನು ಕೇಳುತ್ತಾರೆ. ಪ್ರತಿಯೊಂದು ವರ್ಗದವರು ಸಫಲತೆಯನ್ನು ತೀವ್ರ ಮಾಡಿಕೊಳ್ಳುವುದಕ್ಕಾಗಿ ಯಾವ ಪ್ಲಾನ್ ಅನ್ನು ತಯಾರು ಮಾಡಿದ್ದೀರಿ ಎಂದು. ಕೇವಲ ಮಾಡುವುದಷ್ಟೇ ಅಲ್ಲ 15 ದಿನ ಅದರ ಅಭ್ಯಾಸ ಮಾಡಿ ಪ್ರತ್ಯಕ್ಷದಲ್ಲಿ ತರಬೇಕು. ಸರಿಯಲ್ಲವೇ? ಪ್ರತ್ಯಕ್ಷದಲ್ಲಿ ಆಗಬೇಕಲ್ಲವೇ? ಪರಸ್ಪರ ತಮ್ಮಲ್ಲಿಯೇ ಎಲ್ಲರೂ ಮಾತನಾಡುತ್ತಿರುವುದನ್ನು ನೋಡುತ್ತಾ ಬಾಪ್‌ದಾದಾ ಎಲ್ಲರ ವಾರ್ತಾಲಾಪವನ್ನು ಕೇಳುತ್ತಿರುತ್ತಾರೆ. ಎಲ್ಲರೂ ಹೇಳುತ್ತಿರುತ್ತಾರೆ ಪ್ರತ್ಯಕ್ಷವಾಗಲಿ, ಪ್ರತ್ಯಕ್ಷವಾಗಲಿ ಎಂದು. ಆದರೆ ಮೊದಲು ತಾವು ಮೊದಲು ಪ್ರತ್ಯಕ್ಷವಾಗಿ ಬಿಡಿ. ತಂದೆಯು ತಮ್ಮ ಮುಖಾಂತರ ಪ್ರತ್ಯಕ್ಷವಾಗುವರಲ್ಲವೇ.

ಇಂದು ವಿದೇಶಗಳಲ್ಲಿ ಕೇಳುತ್ತಿದ್ದಾರೆ. ಅಥವಾ ನೋಡುತ್ತಿದ್ದಾರೆ ಅಥವಾ ಇಲ್ಲವೇ? (ನೋಡುತ್ತಿದ್ದಾರೆ) ಒಳ್ಳೆಯದು. ನಿಮ್ಮ ಯಜ್ಞದ ಸ್ಥಾಪನೆಯ ನಂತರವೇ ವಿಜ್ಞಾನದ ವೃದ್ಧಿಯಾಗಿದೆ. ಅದರ ಲಾಭವನ್ನಂತೂ ಪಡೆಯಬೇಕಲ್ಲವೇ. ಆದರೆ ವಿಧಿಪೂರ್ವಕ ಲಾಭವನ್ನು ಪಡೆಯಬೇಕು. ಯಾರಾದರೆ ವಿಜ್ಞಾನ ಸಾಧನಗಳಿಂದ ನೋಡುತ್ತಿದ್ದೀರೋ ಅಥವಾ ಕೇಳುತ್ತಿದ್ದೀರೋ ಆ ಮಕ್ಕಳೆಲ್ಲರಿಗೂ ಎಲ್ಲರಿಗೂ ಮೊದಲು ಬಾಪ್‌ದಾದಾ ಸದಾ ಸ್ಮೃತಿ ಮಾಡುತ್ತಿರುತ್ತಾರೆ. ಎಷ್ಟೆಷ್ಟು ಸ್ಮೃತಿಯು ಶಕ್ತಿಶಾಲಿಯಾಗಿರುತ್ತದೆಯೋ, ಅಷ್ಟಷ್ಟು ಬಾಪ್‌ದಾದಾ ನಮ್ಮೊಂದಿಗೇ ಮಾತನಾಡುತ್ತಿದ್ದಾರೆ ಎಂಬ ಅನುಭವವಾಗುತ್ತದೆ ಆದರೂ ಸಹ ಮಧುಬನವು ಮಧುಬನವೇ.

ಒಳ್ಳೆಯದು. ಈಗೀಗ ತಮ್ಮ ವೃತ್ತಿಯನ್ನು ಏಕಾಗ್ರ ಮಾಡಲು ಸಾಧ್ಯವೇ? ಯಾವ ಕಡೆಗೂ ವೃತ್ತಿ ಏರುಪೇರಿನಲ್ಲಿ ಬರಬಾರದು ಅಚಲ, ಏಕಾಗ್ರ, ಶಕ್ತಿಶಾಲಿ ಆಗಿರಬೇಕು. (ಡ್ರಿಲ್ ಮಾಡಿಸಿದರು) ಒಳ್ಳೆಯದು.

**ನಾಲ್ಕು ಕಡೆಯ ಸರ್ವ ಸೇವಾಧಾರಿ ಮಕ್ಕಳಿಗೆ, ಸದಾ ತಮ್ಮ ಶ್ರೇಷ್ಠ ತರಂಗಗಳಿಂದ ಸೇವೆಯನ್ನು ಮಾಡುವಂತಹ, ತೀವ್ರ ಗತಿ ಪುರುಷಾರ್ಥ ಮಾಡುವಂತಹ ಮಕ್ಕಳಿಗೆ, ಸದಾ ಕ್ಷಮೆಯ ಮಾಸ್ಟರ್ ಸಾಗರ, ಸದಾ ಶುಭ ಭಾವನೆ, ಶುಭಕಾಮನೆಯ ಮೂಲಕ ತುಂಬಾ ಬಲಹೀನ ಆತ್ಮರನ್ನು ಶಕ್ತಿಶಾಲಿಯನ್ನಾಗಿ ಮಾಡುವಂತಹ ಮಾಸ್ಟರ್ ಸರ್ವಶಕ್ತಿವಾನ್ ಮಕ್ಕಳಿಗೆ, ಬಾಪ್‌ದಾದಾರವರ ತುಂಬಾ ತುಂಬಾ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 24-02-2002.

***ತಂದೆಯನ್ನು ಪ್ರತ್ಯಕ್ಷ ಮಾಡುವುದಕ್ಕೋಸ್ಕರ ತಮ್ಮ ಹಾಗೂ ಇತರರ ವೃತ್ತಿಯನ್ನು ಸಕಾರಾತ್ಮಕವಾಗಿ ತಯಾರು ಮಾಡಿರಿ***

ಯಾವ ಲಾಭವೂ ಇರದೇ ಇರುವ ನಕಾರಾತ್ಮಕ ವಿಷಯಗಳನ್ನು ವೃತ್ತಿಯಲ್ಲಿ ಧಾರಣೆ ಮಾಡುವುದು ತಪ್ಪು. ಏಕೆಂದರೆ ಇದರಿಂದ ನೀವು ಮೂಡ್ ಆಫ್ ಆಗುತ್ತೀರಿ. ವ್ಯರ್ಥ ಸಂಕಲ್ಪಗಳು ಬರುತ್ತವೆ. ಸ್ಮೃತಿಯ ಶಕ್ತಿ ಕಡಿಮೆ ಆಗಿಬಿಡುತ್ತದೆ. ಅರ್ಥ ನಷ್ಟವಾಗುತ್ತದೆ. ವೃತ್ತಿ, ತರಂಗಗಳು ಮತ್ತು ವಾಯುಮಂಡಲ ಮೂರಕ್ಕೂ ಸಂಬಂಧವಿದೆ. ವೃತ್ತಿಯಿಂದ ತರಂಗಗಳು ವ್ಯಾಪಿಸುತ್ತವೆ. ತರಂಗಗಳಿಂದ ವಾಯುಮಂಡಲ ತಯಾರಾಗುತ್ತದೆ. ಆದರೆ ಮುಖ್ಯವಾದದ್ದು ವೃತ್ತಿ, ಶೀಘ್ರವಾಗಿ ತಂದೆಯ ಪ್ರತ್ಯಕ್ಷವಾಗಬೇಕು ಎಂದು ನೀವು ಭಾವಿಸುತ್ತಿದ್ದರೆ ಅದಕ್ಕಾಗಿ ತೀವ್ರಗತಿಯ ವಿಧಿಯು ಏನೆಂದರೆ ನಿಮ್ಮ ಪ್ರತಿ ಹಾಗೂ ಇತರರ ಪ್ರತಿ ನಿಮ್ಮ ವೃತ್ತಿಯನ್ನು ಸಕಾರಾತ್ಮಕವಾಗಿ (ಶುದ್ಧವಾಗಿ) ತಯಾರು ಮಾಡಿಕೊಳ್ಳಿರಿ. ಎಂದು ತಿಳಿಸುತ್ತಾ ವಿಶ್ವಕಲ್ಯಾಣಕಾರಿ ಬಾಪ್‌ದಾದಾ ತನ್ನ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**
ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನಗೆ ಶೀಘ್ರವಾಗಿ ತಂದೆಯ ಸಮಾನವಾಗಬೇಕು ಎಂಬ ಲಕ್ಷ್ಯ ಮತ್ತು ಲಕ್ಷಣಗಳು ಸಮಾನವಾಗಿ ಇವೆ.

2. ನನ್ನ ಸಂಕಲ್ಪ, ಮಾತು ಮತ್ತು ಕರ್ಮ ಮೂರು ಶ್ರೇಷ್ಠ ಲಕ್ಷ್ಯದ ಪ್ರಮಾಣವಾಗಿ ಇವೆ.

3. ಚೈತನ್ಯ ಮೂರ್ತಿಯಾದ ನಾನು ನನ್ನ ಶುಭ ಭಾವನೆ, ಶುಭಕಾಮನೆ ವೃತ್ತಿಯಿಂದ ರಾಕೆಟ್ ಗಿಂತಲೂ ಹೆಚ್ಚು ತೀವ್ರಗತಿಯಿಂದ ತರಂಗಗಳನ್ನು ವಾಯುಮಂಡಲದಲ್ಲಿ ವ್ಯಾಪಿಸಿ, ದೃಷ್ಟಿ ಮತ್ತು ಸೃಷ್ಟಿಯನ್ನು ಪರಿವರ್ತನೆ ಮಾಡುತ್ತಿದ್ದೇನೆ, ಅದಕ್ಕೆ ಸ್ಮೃತಿ ಚಿಹ್ನೆಯಾಗಿ ನನ್ನ ಜಡ ಚಿತ್ರಗಳು ಅಂತಿಮದವರೆಗೂ ತರಂಗಗಳ ಮೂಲಕ ಭಕ್ತರಿಗೆ ಸೇವೆಯನ್ನು ಮಾಡುತ್ತಿವೆ.

4. ನನ್ನ ವೃತ್ತಿಯಲ್ಲಿ ಯಾವ ಆತ್ಮನ ಪ್ರತಿಯಾದರು, ಯಾವುದಾದರೂ ವಿರುದ್ಧ(ನೆಗೆಟಿವ್) ತರಂಗಗಳು ಇದ್ದರೆ ನಾನು ವಿಶ್ವದ ವಾಯುಮಂಡಲದಲ್ಲಿ ತರಂಗಗಳು ವ್ಯಾಪಿಸಲಾಗುವುದಿಲ್ಲ ಎಂದು ಪಕ್ಕಾ ಆಗಿ ಅರ್ಥ ಮಾಡಿಕೊಂಡಿದ್ದೇನೆ.

5. ನಾನು ಇತರರ ನಕಾರಾತ್ಮಕತೆಯನ್ನು, ತಪ್ಪುಗಳನ್ನು ನನ್ನ ವೃತ್ತಿಯಲ್ಲಿಟ್ಟುಕೊಳ್ಳುವುದಿಲ್ಲ.

6. ಇತರರು ಎಷ್ಟು ಕೆಟ್ಟವರಾದರೂ, ಬಹಳಷ್ಟು ತಪ್ಪುಗಳನ್ನು ಮಾಡಿದ್ದರೂ, ದುಃಖವನ್ನು ಕೊಡುತ್ತಿದ್ದರೂ ನನ್ನ ವೃತ್ತಿಯಲ್ಲಿ ಅಶುದ್ಧ ಭಾವನೆಯನ್ನು ಇಡದೇ ನಾನು ತಂದೆಯ ಸಮಾನವಾಗಿ ದಯಾ ಹೃದಯಿಯಾಗಿ, ಕ್ಷಮಾ ಸಾಗರನಾಗಿ, ಅವರನ್ನು ಪರಿವರ್ತನೆ ಮಾಡುವುದರಲ್ಲಿ ಸಹಾಯಕನಾಗಿದ್ದೇನೆ.

7. ನಾನು ಸ್ವಯಂಗೆ ಮತ್ತು ಇತರರಿಗಾಗಿ ನನ್ನ ವೃತ್ತಿಯನ್ನು ಶುದ್ಧವಾಗಿ ತಯಾರು ಮಾಡಿಕೊಂಡು ಶೀಘ್ರವಾಗಿ ತಂದೆಯನ್ನು ಪ್ರತ್ಯಕ್ಷ ಮಾಡುತ್ತಿದ್ದೇನೆ.

8. ನನ್ನ ಮನಸ್ಸಿನಲ್ಲಿ ನೆಗೆಟಿವ್ ಅರ್ಥಾತ್ ಕೊಳಕನ್ನು ಧಾರಣೆ ಮಾಡುವುದಿಲ್ಲ. ನಾನು ಜ್ಞಾನವಂತನಾಗಿ, ಕ್ಷಮಾಸಾಗರನಾಗಿ, ದಯಾ ಹೃದಯಿಯಾಗಿ, ಶುಭಭಾವನೆ ಶುಭಕಾಮನೆಯ ಮೂಲಕ ವಾಯುಮಂಡಲವನ್ನು ಪರಿವರ್ತನೆ ಮಾಡುತ್ತಿದ್ದೇನೆ.

9. ನಾನು ಯಾವ ಸೇವಾ ಕೇಂದ್ರವಾದರೂ, ಯಾವ ಸ್ಥಾನವಾದರೂ, ಪ್ರವೃತ್ತಿಯಲ್ಲಿ ಇರುತ್ತಿದ್ದರೂ, ವಾಯುಮಂಡಲವನ್ನು ಸಂಪೂರ್ಣ ನಿರ್ವಿಘ್ನವಾಗಿ ದಯಾಹೃದಯಿಯಾಗಿ ಶುಭ ಭಾವನೆ, ಶುಭಕಾಮನೆಯಿಂದ ಶಕ್ತಿವಂತವಾಗಿ ತಯಾರು ಮಾಡುತ್ತಿದ್ದೇನೆ.

9. ನಾನು ಕಳೆದು ಹೋದದ್ದಕ್ಕೆ ಬಿಂದುವನ್ನು ಇಟ್ಟು ದಯಾ ಸಿಂಧುವಾಗಿ, ಕ್ಷಮಾ ಸಾಗರನಾಗಿ ಇದ್ದೇನೆ.

10. ನಾನು ಎಷ್ಟು ಸ್ಮೃತಿಯನ್ನು ಶಕ್ತಿವಂತವಾಗಿ ಮಾಡುಕೊಳ್ಳುತ್ತಿದ್ದೇನೆಯೋ ಅಷ್ಟು ಬಾಪ್‌ದಾದಾ ನನ್ನೊಂದಿಗೆ ಮಾತನಾಡುತ್ತಿದ್ದಾರೆ ಎಂಬ ಅನುಭವವಾಗಿದೆ.

11. ನನ್ನ ವೃತ್ತಿಯನ್ನು ಅಚಲವಾಗಿ, ಏಕಾಗ್ರವಾಗಿ ಶಕ್ತಿಶಾಲಿಯಾಗಿ ಇಟ್ಟುಕೊಳ್ಳುತ್ತಿದ್ದೇನೆ.